# ಪತ್ರಿಕಾ ಪ್ರಕಟಣೆ

ವೃತ್ತಿ ತೆರಿಗೆ ಪಾವತಿದಾರರಿಗೆ ಮತ್ತಷ್ಟು ಸುಲಭ ಹಾಗು ಪರಿಣಾಮಕಾರಿ ಸೇವೆಯನ್ನು ಒದಗಿಸುವ ಉದ್ದೇಶದಿಂದ ವಾಣಿಜ್ಯ ತೆರಿಗೆ ಇಲಾಖೆಯು ವೃತ್ತಿತೆರಿಗೆ ಜಾಲತಾಣ **https://ptax.karnataka.gov.in/** ಅನ್ನು ದಿನಾಂಕ: 01/07/2026 ರಿಂದ ಅನ್ವಯವಾಗುವಂತೆ ನವೀಕರಿಸಿದೆ.

ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ಆಜೀವಿಕೆಗಳು ಮತ್ತು ಉದ್ಯೋಗಗಳ ಮೇಲಿನ ತೆರಿಗೆ ನಿಯಮಗಳು 1976ರ ನಿಯಮ 27ರ ಅನ್ವಯ, ಇಲಾಖೆಯಿಂದ ಹೊರಡಿಸಲಾಗುವ ನೋಟಿಸ್‌ಗಳು, ನಿರ್ಧಾರಗಳು, ಸಮನ್ಸ್‌ಗಳು, ಆದೇಶಗಳು ಹಾಗು ಇತರೆ ಅಧಿಕೃತ ಸಂವಹನಗಳನ್ನು ಇನ್ನು ಮುಂದೆ ವೃತ್ತಿತೆರಿಗೆ ಜಾಲತಾಣದ (ಆನ್‌ಲೈನ್) ಮೂಲಕ ರವಾನಿಸಲಾಗುವುದು. ಅಲ್ಲದೆ, ದಾಖಲಾದ ವೃತ್ತಿತೆರಿಗೆ ಪಾವತಿದಾರರು ತಮ್ಮ ಉತ್ತರಗಳನ್ನು, ಸಮಜಾಯಿಷಿಗಳನ್ನು, ಆಕ್ಷೇಪಣೆಗಳನ್ನು ಹಾಗು ಇತರೆ ಪ್ರತಿಕ್ರಿಯೆಗಳನ್ನು ಸಹ ಜಾಲತಾಣದ ಮೂಲಕ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಆದ್ದರಿಂದ, ಎಲ್ಲಾ ದಾಖಲಾದ ವೃತ್ತಿತೆರಿಗೆ ಪಾವತಿದಾರರು ಇಲಾಖೆಯಿಂದ ಜಾಲತಾಣದ ಮೂಲಕ ರವಾನೆಯಾಗುವ ಸಂವಹನಗಳನ್ನು ನಿಯಮಿತವಾಗಿ ಪರಿಶೀಲಿಸಿ ತಮ್ಮ ಉತ್ತರಗಳನ್ನು ಆನ್‌ಲೈನ್ ಮೂಲಕವೇ ಸಲ್ಲಿಸುವ ಸೌಲಭ್ಯದ ಸದುಪಯೋಗವನ್ನು ಪಡೆದುಕೊಂಡು ಕಾಯ್ದೆ ಹಾಗು ನಿಯಮಗಳನ್ವಯ ಸಕಾಲದಲ್ಲಿ ಅನುಸರಣೆ ಮಾಡಬೇಕಾಗಿ ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ತಮ್ಮ ವ್ಯಾಪ್ತಿಯ ವೃತ್ತಿತೆರಿಗೆ ಕಚೇರಿ ಅಥವ ಇಲಾಖೆಯ ಸಹಾಯವಾಣಿ ಸಂಖ್ಯೆ **1800-425-6300 (ಶುಲ್ಕರಹಿತ)** ಅನ್ನು ಸಂಪರ್ಕಿಸಬಹುದು.

(ವಿಪುಲ್ ಬನ್ಸಾಲ್)
ವಾಣಿಜ್ಯ ತೆರಿಗೆಗಳ ಆಯುಕ್ತರು,
(ಕರ್ನಾಟಕ), ಬೆಂಗಳೂರು

ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ) ಬೆಂಗಳೂರು